# ಕಾರ್ಮಿಕ ಸಂಹಿತೆಗೆ ಕೇಂದ್ರ ಸಂಪುಟ ಸಮ್ಮತಿ

## ಸಂಸತ್ ಅಧಿವೇಶನದಲ್ಲಿ ಮಂಡನೆ

1/9/20

**ನವದೆಹಲಿ:** ಕೇಂದ್ರ ಸರ್ಕಾರ ಜಾರಿಗೊಳಿಸಲು ಉದ್ದೇಶಿಸಿರುವ ಕಾರ್ಮಿಕ ಸುಧಾರಣಾ ಮಸೂದೆಗೆ ಕೇಂದ್ರ ಸಂಪುಟ ಸಮ್ಮತಿ ಸೂಚಿಸಿದೆ. ಸೆ.14ರಿಂದ ಶುರುವಾಗುವ ಸಂಸತ್‌ನ ಮುಂಗಾರು ಅಧಿವೇಶನದಲ್ಲಿ ಅದನ್ನು ಮಂಡಿಸಿ ಅನುಮೋದನೆ ಪಡೆದುಕೊಳ್ಳುವ ಇರಾದೆಯನ್ನೂ ಸರ್ಕಾರ ಹೊಂದಿದೆ. ಕಳೆದ ವರ್ಷದ ಜೂನ್ ನಲ್ಲಿ 44 ಕಾರ್ಮಿಕ ಕಾನೂನುಗಳನ್ನು ವಿಲೀನಗೊಳಿಸಿ ನಾಲ್ಕು ಕಾರ್ಮಿಕ ಸಂಹಿತೆಯಾಗಿ ಬದಲು ಮಾಡಲು ನಿರ್ಧರಿಸಲಾಗಿತ್ತು.

ವೇತನ ಕುರಿತ ಸಂಹಿತೆಯನ್ನು ಈಗಾಗಲೇ ಸಂಸತ್‌ನಲ್ಲಿ ಅಂಗೀಕರಿಸಲಾಗಿದೆ. ಇತರ ಮೂರು ಸಂಹಿತೆಗಳನ್ನು ಸಂಸತ್‌ನ ಸ್ಥಾಯಿ ಸಮಿತಿ ಅಧ್ಯಯನಕ್ಕೆ ನೀಡಲಾಗಿತ್ತು. ಅಲ್ಲಿಂದಲೂ ಸಮ್ಮತಿ ವ್ಯಕ್ತವಾದ ಬಳಿಕ ಸಂಪುಟದಿಂದಲೂ ಹಸಿರು ನಿಶಾನೆ ಪಡೆದುಕೊಂಡಿದೆ. ಕಾರ್ಮಿಕರಿಗೆ ಭವಿಷ್ಯ ನಿಧಿ ನೀಡಿಕೆ, ಹೆರಿಗೆ ರಜೆ, ವಿಮೆ ವ್ಯವಸ್ಥೆಯೂ ಇದರಲ್ಲಿ ಸೇರಿಕೊಂಡಿದೆ. ಕೈಗಾರಿಕಾ ವಿವಾದಗಳನ್ನು ಪರಿಹರಿಸುವ, ಕೈಗಾರಿಕಾ ಕ್ಷೇತ್ರದಲ್ಲಿ ಆರೋಗ್ಯ ಮತ್ತು ಇತರ ಸುರಕ್ಷತಾ ವ್ಯವಸ್ಥೆ ಅಳವಡಿಸುವ ಅಂಶಗಳು ಇವೆ. ಕೊರೊನಾದಿಂದಾಗಿ ಆರ್ಥಿಕ ಸಂಕಷ್ಟ ಉಂಟಾಗಿರುವ ಈ ಸಂದರ್ಭದಲ್ಲಿ ಈ ಹೊಸ ಸಂಹಿತೆ ಜಾರಿ ಮಹತ್ವ ಪಡೆದಿದೆ. ಇದರಿಂದ ವಿದೇಶಿ ಕಂಪನಿಗಳಿಗೆ ಸುಲಲಿತವಾಗಿ ಉದ್ದಿಮೆ, ವ್ಯವಹಾರಗಳನ್ನು ನಡೆಸುವುದು ಸುಲಭವಾಗಲಿದೆ.

ಉತ್ಪಾದನೆ ಕುಂಠಿತ ಕಂಡ ಹಿನ್ನೆಲೆಯಲ್ಲಿ ಆರು ರಾಜ್ಯಗಳು ತಮ್ಮ ಕಾರ್ಮಿಕ ಕಾನೂನುಗಳಲ್ಲಿ ಕೊಂಚ ಮಾರ್ಪಾಟು ಮಾಡಿವೆ. ಅದರಂತೆ, ಕಾರ್ಮಿಕರಿಗೆ 12 ಗಂಟೆ ದುಡಿಮೆ ವಿಧಿಸಲಾಗಿದೆ. ರಾಜಸ್ಥಾನ ಮತ್ತು ಪಂಜಾಬ್‌ನಲ್ಲಿ ಕೂಡ ಕಾರ್ಮಿಕ ಕಾನೂನುಗಳು ಬದಲಾಗಿವೆ. ರಾಜಸ್ಥಾನದಲ್ಲಿ ಹೆಚ್ಚುವರಿ ಅವಧಿಗೆ ಕೆಲಸ ಮಾಡುವ ಅವಧಿಗೆ ಓವರ್ ಟೈಮ್ ಭತ್ಯೆ ನೀಡಲು ಆದೇಶ ನೀಡಲಾಗಿದೆ.